# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1216
2. ಸದಸ್ಯರ ಹೆಸರು : ಶ್ರೀ ಎಂ. ಎ. ಗೋಪಾಲಸ್ವಾಮಿ
3. ಉತ್ತರಿಸಬೇಕಾದ ದಿನಾಂಕ : 23-12-2021

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ ಮರಡಿಪೂರ ಗ್ರಾಮದಲ್ಲಿ ಜಾರನಕಟ್ಟೆ ಹಳ್ಳದಲ್ಲಿ ಕೆರೆ ನೀರು ಹರಿಯುತ್ತಿರುವುದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಜಾರನಕಟ್ಟೆ ಹಳ್ಳಕ್ಕೆ ಅಡ್ಡಲಾಗಿ 3 ವಿವಿಧ ಸ್ಥಳಗಳಲ್ಲಿ ಚೆಕ್ ಡ್ಯಾಂ ನಿರ್ಮಿಸಲು ಜನಪ್ರತಿನಿಧಿಗಳಿಂದ ಮನವಿ ಸ್ವೀಕೃತವಾಗಿದ್ದು, ಸದರಿ ವಿಷಯದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕಾವೇರಿ ನೀರಾವರಿ ನಿಗಮಕ್ಕೆ ಸೂಚಿಸಲಾಗಿದ್ದು, ನಿಗಮದ ಪರಿಶೀಲನೆಯಲ್ಲಿದೆ.</td></tr>
<tr><td>ಆ</td><td>ಚೆಕ್ ಡ್ಯಾಂ ನಿರ್ಮಾಣ ಮಾಡಲು ಕಳೆದ 2 ವರ್ಷಗಳಿಂದ ಪರಿಶೀಲನೆ ಮಾಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಚೆಕ್ ಡ್ಯಾಂ ನಿರ್ಮಾಣ ಮಾಡಲು ಆಗಿರುವ ತೊಂದರೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td></tr>
<tr><td>ಇ</td><td>ಚೆಕ್ ಡ್ಯಾಂ ನಿರ್ಮಾಣದಿಂದ ಸಾವಿರಾರು ರೈತರಿಗೆ ಅನುಕೂಲವಾಗುವುದು ಹಾಗೂ ಕೊಳವೆಬಾವಿ ಹಾಗೂ ಬಾವಿಗಳಿಗೆ ಅನುಕೂಲವಾಗುವುದರಿಂದ ಚೆಕ್ ಡ್ಯಾಂ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು;</td><td>ಪ್ರಸಕ್ತ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳ ಕಾರ್ಯಭಾರ ಅಧಿಕವಾಗಿರುವುದರಿಂದ ಚಾಲ್ತಿಯಲ್ಲಿರುವ ಸುತ್ತೋಲೆಗಳನ್ವಯ ಲಭ್ಯವಿರುವ ಅನುದಾನದಲ್ಲಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಕಷ್ಟಸಾಧ್ಯವಾಗುತ್ತಿರುವುದರಿಂದ, ಮುಂಬರುವ ಆರ್ಥಿಕ ವರ್ಷಗಳಲ್ಲಿ ನಿಗಮಕ್ಕೆ ಹಂಚಿಕೆಯಾಗುವ ಅನುದಾನದಲ್ಲಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.</td></tr>
<tr><td>ಈ</td><td>ಚೆಕ್ ಡ್ಯಾಂ ನಿರ್ಮಾಣ ಮಾಡಲು ಎಷ್ಟು ಹಣ ಖರ್ಚಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)</td><td>ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ, ಮರಡಿಪೂರ ಗ್ರಾಮದಲ್ಲಿ ಜಾರನಕಟ್ಟೆ ಕೆರೆ ಕೋಡಿಹಳ್ಳದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಚೆಕ್ ಡ್ಯಾಂಗಳ ವಿವರಗಳು ಕೆಳಕಂಡಂತಿರುತ್ತವೆ :
<table>
<tr><th>ಕ್ರ ಸಂ.</th><th>ಕಾಮಗಾರಿಯ ಹೆಸರು</th><th>ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>1.</td><td>ಜವರೇಗೌಡ ಬಿನ್ ಬೋರೇಗೌಡರ ಜಮೀನಿನ ಹತ್ತಿರ ಚೆಕ್ ಡ್ಯಾಂ</td><td>25.00</td></tr>
<tr><td>2.</td><td>ಪಡಿಗೌಡ ಬಿನ್ ಶ್ರೀನಿವಾಸ ಜಮೀನಿನ ಹತ್ತಿರ ಚೆಕ್ ಡ್ಯಾಂ</td><td>25.00</td></tr>
<tr><td>3.</td><td>ಮರಡಿಪುರದಲ್ಲಿ ಚೆಕ್ ಡ್ಯಾಂ</td><td>35.00</td></tr>
<tr><td>4.</td><td>ಬ್ರಹ್ಮದೇವರಹಳ್ಳಿ ಮುಖ್ಯ ರಸ್ತೆಯಿಂದ ಮರಡಿಪುರ-ಹೇಮಾವತಿ ನಾಲೆಗೆ ಹೋಗುವ ಮುಖ್ಯ ರಸ್ತೆಯಲ್ಲಿರುವ ಹಳ್ಳಕ್ಕೆ ಬ್ರಿಡ್ಜ್ ನಿರ್ಮಾಣ</td><td>10.00</td></tr>
<tr><td></td><td>ಒಟ್ಟು :</td><td>**95.00**</td></tr>
</table>
</td></tr>
</table>

*ಸಂಖ್ಯೆ:ಜಸಂಇ 211 ಎನ್‌ಎಲ್‌ಎ 2021*

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು